ಮೈಸೂರ ಗೆಜೆಟ್

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ ಮಾರ್ಚಿ ತಾ|| 29, ಸ್ರ 1890.

ಸೂಚನೆ— ಈ ಭಾಗವನ್ನು ಪ್ರತ್ಯೇಕ ಕೆರಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ಗಳು, ವಗೈರೆಗಳಿಂದ ಕೊಡೋಕಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಜೇಫ್ ಕೋರ್ಟನಲ್ಲಿ.

ಸಿವಿಲ್ ತರಫು.

ರೂಲ್ ಅಫ್ ಪ್ರಾಕ್ಟಿಸ್—ಆಚರಣ ನಿಬಂಧನೆ, ನಂಬರ್ 80.

ತಾರೀಖು 14ನೇ ಮಾರ್ಚಿ 1890ನೇ ಈಸವಿ.

ಕಕ್ಷಿಗಾರರು ಹಾಜರ್ಮಾಡಿದ ದಸ್ತೈವಜುಗಳನ್ನು ನಾಕ ಮಾಡತಕ್ಕ ವಿಷಯದಲ್ಲಿ ಕೊಟ್ಟಿರುವ 61—66ನೇ ನಂಬರ್ ಆಚರಣ ನಿಬಂಧನೆಗಳಲ್ಲಿ ನಮೂದಾಗುವ ವಾಯಿದೆಯು ಸ್ವಲ್ಪವಾಗಿದೆ ಎಂತಲೂ, ಇದರಿಂದ ಕಕ್ಷಿಗಾರರಿಗೆ ಬಹಳ ಪ್ರತಿಕೂಲ ಉಂಟಾಗಿದೆ ಎಂತಲೂ, ಈ ಕೋರ್ಟಿಗೆ ತಿಳಿಯಬಂತು; ಆದಕಾರಣ ಮೇಲೆಕಂಡ ಆಚರಣ ನಿಬಂಧನೆಗಳು ಇದರಿಂದ ರದ್ದು ಮಾಡಲ್ಪಟ್ಟವೆ ಎಂತಲೂ, ಮುಂದಕ್ಕೆ ಕಕ್ಷಿಗಾರರು ಹಾಜರ್ಮಾಡುವ ದಸ್ತೈವಜುಗಳನ್ನು ನಾಕ ಪಡಿಸ ಕೂಡದೆಂತಲೂ, ಚೀಫ್ ಕೋರ್ಟನವರು ಅಪ್ಪಣೇ ಮಾಡು ತಾರೆ.

ಕೋರ್ಟನಿಂದ,
ಎಸ್. ಆರ್. ಸುಬ್ಬರಾಯರ್,
ರಿಜಿಸ್ಟ್ರಾರ್.

ಫಾರೆಸ್ಟ್ ಇಲಾಖಾ.

ತಾರೀಖು 20ನೇ ಫಿಬ್ರವರಿ ಸ್ರ 1890.

ಸ್ರ 1878ನೇ ಇಸವಿ ಫಾರೆಸ್ಟ್‌ರೂಲ್ಸಿನ 9ನೇ ಸೆಕ್ಷನ್ ಅನುಸರಿಸಿ ಈ ಕೆಳಗೆ ನಮೂದಿಸಿ ಯಿರುವ ನಂದೀ ಸ್ಟೇಟ್ ಫಾರೆಸ್ಟಿನ ಗಡಿ ನಿಷ್ಕರ್ಷೆ ಇದರಿಂದ ಸಕಲ ಜನಗಳ ತಿಳುವಳಿಕೆ ಬಗ್ಗೆ ಪಾಯಿಷ್ ಮಾಡಲ್ಪಟ್ಟಿರುತ್ತೆ.

ನಂದೀ ಸ್ಟೇಟ್ ಫಾರೆಸ್ಟ್.

ಉತ್ತರಕ್ಕೆ—ಚಿಕ್ಕಬಳ್ಳಾಪುರ ತಾಲ್ಲೂಕು ನಾರಾಯಣಪುರ ಕಣುವೆ ಸರಹದ್ದು.

ಪೂರ್ವಕ್ಕೆ—ನಂದೀ ಗ್ರಾಮದ ಸರ್ವೆ ನಂಬರುಗಳು 77, 78, 79, 103, ಮತ್ತು 106, ಅಂಗಟ್ಟು ಗ್ರಾಮದ ಸರ್ವೆ ನಂಬರ್ 42, ಕುರುವಾವತ್ತಿ ಗ್ರಾಮದ ಸರ್ವೆ ನಂಬರುಗಳು 19, 126, 152, 154, 155, ಮತ್ತು 157, ಸುಲ್ತಾನಪ್ಯಾಟೆ ಗ್ರಾಮದ ಸರ್ವೆ ನಂಬರುಗಳು 50 ಮತ್ತು 80 ಯಾನೆ ಸರಹದ್ದುಗಳು.

ದಕ್ಷಿಣಕ್ಕೆ—ದೊಡ್ಡ ಬಳ್ಳಾಪುರ ತಾಲ್ಲೂಕು ಮುಜರೆ ಕಣುವೆಪುರ ಹೆಗ್ಗಡಹಳ್ಳಿ ಸರಹದ್ದು. ಮತ್ತು ಹೊಸದಾಗಿ ಆಗಿ ಯಿರುವ ಕೋಲಾರ ಸೋಮಪುರ ರಸ್ತೆ.

ಪಟ್ಟಿಮಕ್ಕೆ.—ದೊಡ್ಡಬಳ್ಳಾಪುರ ತಾಲ್ಲೂಕು ಚನ್ನಾಪುರ ಗ್ರಾಮದ ಮಡಿಕಾ ಹೊಸಹಳ್ಳಿ ಸರ್ವೆ ನಂಬರುಗಳು 79, 81, 82, 83, 87, 88, 89—90, ಮತ್ತು 91 ಯಾನೆ ಸರಹದ್ದುಗಳು. ದೊಡ್ಡಬಳ್ಳಾಪುರ ತಾಲ್ಲೂಕು ವೆಂಕಟಾಪುರ ಗ್ರಾಮದ ಮುಜರೇ ಚಿಕ್ಕರಾಯಪ್ಪನಹಳ್ಳಿ ಸರ್ವೆ ನಂಬರುಗಳು 17, 23, 24 ಮತ್ತು 100 ಯಾನೆ ಸರಹದ್ದುಗಳು.

ತಿಳಿಯತಕ್ಕ ಅಂಶ—ಡಿವಾಕ್ಷೇರ್ಷ್ ಲೈನು 13 ಮೈಲಿಯೂ ಒಂದು ಫರ್‌ಲಾಂಗ್ ಆಗುತ್ತೆ.

ತಾರೀಖು 13ನೇ ಫಿಬ್ರವರಿ 1890.

ಸ್ರ 1890ನೇ ಇಸವಿ ಜನವರಿ 21ನೇ ಮರ್ಕುಮಿನ ಇಸ್ತಿಹಾರ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ,—ಇನ್ನೊಂದು ಹುಕುಂ ಕೊಡುವ ಪರಿಯಂತರ ಬೀರೂರು ಡಿಪೋದಲ್ಲಿ ನಾಲಾ ಮತ್ತು ಬೊಂಬುಗಳು ಇದರಡಿ ನಮೂದಾಗುವ ದರಗಳ ಪ್ರಕಾರ ವಿಕ್ರಯಿಸಲ್ಪಡುವದು.

ತೇಗ ಅವಲ್‌ತರಹ	ಘನ ಅಡಿ 1ಕ್ಕೆ	1	10	0	ಮನ್ನಾಜಾತಿ ಅಲ್ಲದ್ದು ದುಯ್ಯಂ	ಘನಅಡಿ 1ಕ್ಕೆ.	0	9	0
ಡಿಟೋ ದುಯ್ಯಂ	ಡಿಟೋ	1	6	0	ತೇಗದ ಕೂಚಗಳು ..	ಡಿಟೋ	0	14	0
ಡಿಟೋ ಶಿಯ್ಯಂ	ಡಿಟೋ	1	2	0	ಕಾಡುಜಾತಿ ಕೂಚಗಳು ..	ಡಿಟೋ	0	8	0
ಮನ್ನಾಜಾತಿ ಅವ್ವಲ್ ತರಹೆ	ಡಿಟೋ	0	15	0	ಸಂಣ ಬಿದರು ..	ದರ 100ಕ್ಕೆ	5	8	0
ಡಿಟೋ ದುಯ್ಯಂ	ಡಿಟೋ	0	13	0	ದೊಡ್ಡ ಬಿದರು ..	ಡಿಟೋ	13	0	0
ಮನ್ನಾಜಾತಿ ಅಲ್ಲದ್ದು ಅವ್ವಲ್ ತರಹೆ ಡಿ||		0	10	0					

ತಾರೀಖು 28ನೇ ಜನವರಿ 1890.

ಇದರಿಂದ ತಿಳಿಯಪಡಿಸುವದೇನಂದರೆ, ಸ್ರ 1878ನೇ ಇಸವಿ ಜೂ 8ನೇ ತಾರೀಖಿನ ಫಾರೆಸ್ಟ್ ರೂಲ್ಸು 13ನೇ ಸೆಕ್ಷರ್ಷ ಅನುಸರಿಸಿ ಈ ಕೆಳಗೆ ನಮೂದಿಸಿರುವ ಬೆಂಕಿಯಿಂದ ಕಾಪಾಡಲ್ಪಟ್ಟ ಶಿವಮೊಗ್ಗಾ ಡಿಸ್ಟ್ರಿಕ್ಟ ಫಾರೆಸ್ಟ್ ಮತ್ತು ಪ್ಲಾಂಟೇರ್ಷಗಳನ್ನ ಷಿಕಾರಿಗಳಿಗೂ ಅಂಬುಗಾರು) ಯಾ ಬ್ಯಾಟೆಗಾರರಿಗೂ ಬಂದ್ ಮಾಡಲ್ಪಟ್ಟಿರುತ್ತೆ. ಯಾವ ಮನುಷ್ಯ ಅಥವಾ ಮನುಷ್ಯರುಗಳಾಗಲಿ ಈ ಫಾರ್ಜ್ ಫಾರೆಸ್ಟ್ ಆಫಿಸರವರ ಲಿಖಿತಮೂಲಕ ಅಪ್ಪಣೆ ಶಿವಾಯಿ ಐರ್ಜ್ ಜಂಗ್ಲಿಗಳಲ್ಲು ಮತ್ತು ಪ್ಲಾಂಟೇರ್ಷಗಳಲ್ಲು ಮೇಲ್ಕಂಡ ಬ್ಯಾಟೆ ವಗೈರೆ ಬಗ್ಗೆ ಪ್ರವೇಶ ಮಾಡಕೂಡದು.

1.	ಶಂಕರಗುಡ್ಡಾ	ಸ್ಟೇಟ್‌ಫಾರೆಸ್ಟ್	.. ಶಿವಮೊಗ್ಗಾ ತೀರ್ಥಹಳ್ಳಿ ಮತ್ತು ಕುಂಸಿ ತಾಲ್ಲೂಕುಗಳು
2.	ಸಕ್ಕರೆಬೈಲ್	ಡಿಟೋ	.. ಶಿವಮೊಗ್ಗಾ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳು
3.	ಕಕ್ಕೆವಾಡಾ ಉಬ್ಬಾಣಿ	ಡಿಟೋ	.. ಶಿವಮೊಗ್ಗಾ ಚಿನ್ನಗಿರಿ ಮತ್ತು ತರೀಕೆರೆ ತಾಲ್ಲೂಕುಗಳು
4.	ಮುಲೆಬೆನ್ನೂರು	ಡಿಟೋ	.. ಹೊನ್ನಾಳಿ ಮತ್ತು ದಾವಣಗೆರೆ ತಾಲ್ಲೂಕುಗಳು
5.	ಬಸವಂದಿಹಳ್ಳಿ	ಡಿಟೋ	.. ಷಿಕಾರಿಪುರ ತಾಲ್ಲೂಕು
6.	ತೂಗರಿ	ಡಿಟೋ	.. ಡಿಟೋ
7.	ಕವಲೆ	ಡಿಟೋ	.. ಡಿಟೋ
8.	ತೆಲ್ಲಗುಡ್ಡಿ	ಡಿಟೋ	.. ಸೊರಬ ತಾಲ್ಲೂಕು
9.	ಅರಶೆಲ್ಲಗುಡ್ಡೆ	ಡಿಟೋ	.. ಡಿಟೋ
10.	ಅಲಕೊಲಾ	ಪ್ಲಾಂಟೇರ್ಷ	.. ಶಿವಮೊಗ್ಗಾ ತಾಲ್ಲೂಕು
11.	ಅನಸನಕಟ್ಟೆ	ಡಿಟೋ	.. ಡಿಟೋ
12.	ಸಕ್ಕರೆಬೈಲ್	ಡಿಟೋ	.. ಡಿಟೋ
13.	ಸಿದ್ದಿಹಳ್ಳಿ	ಡಿಟೋ	.. ಸೊರಬ ತಾಲ್ಲೂಕು
14.	ಕಲ್ಲೇನಹಳ್ಳಿ	ಡಿಟೋ	.. ಷಿಕಾರಿಪುರ ತಾಲ್ಲೂಕು

ಮೇಲ್ಕಂಡ ಅಯಾಮಿನಲ್ಲಿ ಅಂದರೆ ಸ್ರ 1890ನೇ ಇಸವಿ ಫಿಬ್ರವರಿ ಗುರ್ರೇ ಅಥವಾ ಸಂದರ್ಭಾನುಸಾರ ಜನವರಿ ಲಾಗಾಯತ್ತು ಮೇ 31ರ ವರಿಗೆ ಜಂಗ್ಲಿ ವ ಪ್ಲಾಂಟೇರ್ಷಗಳಲ್ಲಿ ಪ್ರವೇಶಿಸಲು ಅಪ್ಪಣೆ ಕೊಡಲಾರದು ಮತ್ತು ಅತಿಕ್ರಮ ಪ್ರವೇಶ ಮಾಡುವವರು ಪ್ರಾಸಿಕ್ಯೂರ್ಷಗೂ ನೊಳಪಟ್ಟಾರು.

ನೋಟಿಸ್ ಕ್ಷೇರ್ಷ.

ತಾರೀಖು 11ನೇ ಸ್ರ 1890ನೇ ಇಸವಿ.

ಇದರಿಂದ ಘಾಯಿಷ್ ಮಾಡುವದೇನಂದರೆ, ಸಾಗರ ತಾಲ್ಲೂಕು ಭಾರಂಗಿ ಕೇಕದಾರ್‌ಗೆ ಸರಕಾರದ ಉಪಯೋಗಕ್ಕಾಗಿ ಕೊಟ್ಟಿದ್ದ "F" ಅಕ್ಷರವುಳ್ಳ ನಂಬರ್ ಇಲ್ಲದ ಫಾರೆಸ್ಟ್ ತಸ್ಸೆ ಮುದ್ರೆಯು ಸದರೀ ಕೇಕದಾರ್ ವಾಸಮಾಡುತ್ತಿದ್ದ ಗುಂಡು ಮನೆ ನರಸಪ್ಪನ ಮನೆ ಅಕಸ್ಮಾತ್ತಾಗಿ ಬೆಂಕಿಯಿಂದ ಸುಟ್ಟು ಕಾಲವಲ್ಲಿ ಸುಟ್ಟು ಅಥವಾ ಗೈರ್‌ವಿಲೆ ಆಗಿರುತ್ತೆಂದು ತಿಳಿಯಬಂದಿರುವದ್ದರಿಂದ ಅದಕ್ಕೆ ಬದಲಾಗಿ ಹೊಸ ಮುದ್ರೆಯು ಕೊಪಸ್ರಷ್ಟಿರುತ್ತೆ.

ತಾರೀಖು 17ನೇ ಮಾರ್ಚಿ 1890.

ಇದರಿಂದ ಘೋಷಿಸ್ ಮಾಡುವದೇನಂದರೆ, ಸಾಗರ ತಾಲ್ಲೂಕು ಕಾರೂರು ಮಾಗಣಿ ಕೇಕದಾರ್ ಚಿನ್ನದ ಹೊಳೀ ದಾಟುವ ವೇಳೆ ನಂ ಬರ್ ಯಿಲ್ಲದ F ಯೆಂದು ಗುರ್ತುವುಳ್ಳ ಠಸ್ಸೆ ಮೊಪರ್ ಕಳಕೊಂಡಹಾಗೆ ತಿಳಿದು ಬಂದು ಯಿರುವದ್ದರಿಂದ ಅದಕ್ಕೆ ಬದಲಾಗಿ ಬೇರೆ ಬಂ ದು ಹೊಸ ಮೊಹರ್ ಕೊಡಲ್ಪಟ್ಟಿರುತ್ತೆ.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 17—2—90ರಲ್ಲು—ರಾಜೆಬೆನ್ನೂರು ಮತ್ತು ಶಿವನೆ ರೈಲ್‌ವೆ ಸ್ಟೇಷ್‌ನ್‌ಗಳ ನುಧ್ಯೆ ಶ್ರೀನಿವಾಸ ರಾಯರೆಂಬವರ ಕಳವಾದ ಮಾಲಿನವಿವರ.

		ರೂ.	ಆ.	ಪೈ.
(1)	ಬಳ್ಳಿ ದೊಡ್ಡ ಮುತ್ತು 10 ಸಂಣ ಮುತ್ತು 8 ಹಾಕಿದ ಚಿನ್ನದ ಮುಖರ 1ಕ್ಕೆ ..	150	0	0
(2)	ಸುವರ್ಣ 7½ ತೊಲೆ ವುಳ್ಳ ಭಂಗಾರದ ಗೀರುಬಳೆ 2ಕ್ಕೆ	150	0	0
(3)	ಚಿನ್ನದ ಸರಪಣಿ ಮತ್ತು ಕೀವೆ ಮುತ್ತು ಹಾಕಿದ ಬುಗಡಿ ಝೂಲರಿ 2ಕ್ಕೆ ..	10	0	0
(4)	ಚಿನ್ನದ ಗೂಬಿಬಾಳಾಕೀಬಿ ಮುತ್ತು ಸುತ್ತಿಯಿತ್ತು	5	0	0
(5)	ಚಿನ್ನದ ಅರಳಿಲೆ ಕೆಂಪುಹಾಕಿ ಕೀಬಿ ಮುತ್ತು ಸುತ್ತಿದ ಬಾಬತು 1ಕ್ಕೆ ..	5	0	0
(6)	ಹುಡುಗಳ ಬೆಳ್ಳಿಕಾಲುಗೆಜ್ಜೆ ಜೊತೆ 1ಕ್ಕೆ	10	0	0
(7)	ಬೆಳ್ಳಿ ಪಾಡಗ ಜೊತೆ 1ಕ್ಕೆ	5	0	0
(8)	ಬೆಳ್ಳಿಕಾಲುಂಗರ ಜೊತೆ 1ಕ್ಕೆ	8	0	0
(9)	ತರಜೇವಾದ ದೇಶಿಕುಪನದ ಖಣಗಳು 6ಕ್ಕೆ	5	0	0
	ಜುಮ್ಲಾ	348	0	0

ತಾರೀಖು 5—3—1890ನೇ ಇಸವಿ ಬೆಂಗಳೂರು

ಸಿ. ಹಾರ್ಡಿ,
ರೈಲ್ವೆ ಪೊಲೀಸ್ ಆ|| ಕಮ್ಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಮಾರ್ಚಿ 1890.

ಇಸ್ತಿಹಾರ್‌ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದಿರಡಿ ನಮೂದಾಗುವ ತಾಲ್ಲೂಕುಗಳಲ್ಲಿ ಕುರಂಗದ ಕಲ್ಲು ಜಮಾ ಯಿಸತಕ್ಕ ಹಕ್ಕನ್ನು 1890ನೇ ಇಸವಿ ಮಾರ್ಚಿ ತಾರೀಖು 31ರಲ್ಲು ಆಯಾಯ ತಾಲ್ಲೂಕು ಕಚೇರಿಯಲ್ಲಿ ಹರಾಜು ಮೂಲಕ ವಿಕ್ರ ಯಿಸಲ್ಪಡುತ್ತೆ. ಹರಾಜು ದಿವಿ 11 ಘಂಟೆಗೆ ಆರಂಭಿಸಲ್ಪಡುವದು.

ಬವರಿಂಗ್‌ಪೇಟೆ, ಶಿಡ್ಲಘಟ್ಟ, ಗೋರೀಬಿದನೂರು.

2. ಅಮಲ್‌ದಾರು ಅಥವಾ ಶಿರಸ್ತೇದಾರು ಹರಾಜು ಮಾಡಿಸುತ್ತಾರೆ.
3. ಚಡ ಸವಾಲ್ ಅಂಗೀಕರಿಸತಕ್ಕದ್ದು ಮೈಸೂರು ದಿವಾ ನ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಯಿರುತ್ತೆ.
4. ಇಜಾರೆ 1891ನೇ ಇಸವಿ ಮಾರ್ಚಿ 31ನೇ ತಾರೀಖಿನ ವರಿಗೆ ಜಾರೀಲಿ ಯಿರುವದು.
5. ಹರಾಜ್ ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನು ತಿಳಿಸಬೇಕು, ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದುಕೊಂಡಿರುವ ಅಧಿಕಾರ ಪತ್ರಿಕೆ ಹಾಜರ್ಮಾಡಬೇಕು, ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.
6. ಚಡ ಸವಾಲ್‌ದಾರನು ಹರಾಜ್ ಕಾಲದಲ್ಲಿ ತನ್ನ ಸವಾಲ್ ಮೊಬಲಗು ವೈಕಿ ಕೇಕಡಾ 25 ರೂಪಾಯಿಗಳ ಮೇರೆ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ಮಂಜೂರಾದ ಸಂಗತಿ ಅಮಲ್‌ದಾರ್ರಿಂದ ತಿಳಿಸಲ್ಪಟ್ಟ ಲಾಗಾಯತು 7 ದಿವಸಗಳ ವಳಗಾಗಿ ಬಾಕಿ ಮೊಬಲಗನ್ನು ಮತ್ತು ಚಡ ಸವಾಲ್ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ 1 ಅಣೆ ಮೇರಿಗೆ ಕೋಕಲ್‌ಸೆಸ್ ಸಹ ಹಾಜರ್ಮಾಡಬೇಕು, ಇದಕ್ಕೆ ತಪ್ಪಿದರೆ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡುವ ದು, ಡಿಪಾಜಿಟ್ ಹಾಜರ್ಮಾಡದೆ ಯಿದ್ದಾಗ್ಯೂ ಅಥವಾ ಬಾಕಿ ಮೊಬಲಗು ಪೂರ್ತಿ ಮಾಡದೆ ಯಿದ್ದಾಗ್ಯೂ ಈ ಬಾಬು ಪುನಹ ಹರಾಜ್ ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಮೊದಲ್ ಚಡ ಸವಾಲ್‌ದಾರನು ಗುರಿಮಾಡಲ್ಪಡುವದು.